**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆ:** 645/2023

**ಸಾಕ್ಷಿಯನ್ನು ದಿಃ 18.02.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಪೂರ್ವಿಕ | ಸಿ.ಡಬ್ಲ್ಯೂಃ 3 | ಪಿ.ಡಬ್ಲ್ಯೂಃ 1 |
| ತಂದೆಯ ಹೆಸರು | ರಮೇಶ್ .ಹೆಚ್ .ಎಸ್ | | |
| ವಯಸ್ಸು | 10 ವರ್ಷ | | |
| ಕೆಲಸ | ವಿದ್ಯಾರ್ಥಿನಿ | | |
| ವಾಸಸ್ಥಳ | ಹುಣಸೂರು | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

**ಸಾಕ್ಷಿಯು ಬಾಲಸಾಕ್ಷಿಯಾಗಿದ್ದು, ಆಕೆಯ ಮಾನಸಿಕ ಸಾಮರ್ಥ್ಯವನ್ನು ಅರಿಯುವ ಸಲುವಾಗಿ ನ್ಯಾಯಾಲಯ ಈ ಕೆಳಕಂಡಂತೆ ಕೆಲವು ಪ್ರಶ್ನೆಗಳನ್ನು ಕೇಳಿದೆ**

1. ನೀನು ಯಾವ ತರಗತಿಯಲ್ಲಿ ಓದುತ್ತೀಯಾ?

ಉಃ 5ನೇ ತರಗತಿಯಲ್ಲಿ ಓದುತ್ತೀದ್ದೀನಿ.

2. ನಿನ್ನ ಜನ್ಮ ದಿನಾಂಕ ಗೊತ್ತಾ ಎಂದರೆ ದಿಃ 13.01.2015 ಎನ್ನುತ್ತಾರೆ.

3. ನೀನು ಈ ದಿನ ಎಲ್ಲಿಗೆ ಬಂದಿದ್ದೀಯಾ ಗೊತ್ತಾ ಎಂದರೆ ನ್ಯಾಯಾಲಯಕ್ಕೆ ಬಂದಿದ್ದೇನೆ ಎನ್ನುತ್ತಾರೆ.

4. ಇಲ್ಲಿ ಏನು ನಡೆಯುತ್ತದೆ ತಿಳಿದಿದೇಯಾ ಎಂದರೆ ಗೊತ್ತಿಲ್ಲ ಎಂದು ನುಡಿದ ಕಾರಣ ನ್ಯಾಯಾಲಯಗಳಲ್ಲಿ ಯಾವುದಾದರೂ ಘಟನೆ ಬಗ್ಗೆ ಪ್ರಕರಣ ದಾಖಲಾಗುತ್ತದೆ ಅದರ ಬಗ್ಗೆ ವಿಚಾರಣೆ ಮಾಡಲು ಸಾಕ್ಷಿಗಳನ್ನು ಕರೆಯಿಸಿ ಪ್ರಶ್ನೆಗಳನ್ನು ಕೇಳಲಾಗುತ್ತದೆ. ಘಟನೆಯಲ್ಲಿ ಏನು ನಡೆಯಿತು ಎಂಬುದನ್ನು ನ್ಯಾಯಾಲಯದಲ್ಲಿ ತಿಳಿಸಬೇಕು ಎಂದು ಸಾಕ್ಷಿಗೆ ತಿಳಿಸಿ ಪುನಃ ಪ್ರಕರಣ ಎಂದರೇನೂ ಗೊತ್ತಾ ಎಂದಾಗ ಸಾಕ್ಷಿಯು ಹೌದು ಗೊತ್ತು, ಯಾವುದಾದರೂ ಇನ್ಸಿಡೆಂಟ್ ನಡೆದಿದ್ದರೆ ಅದರ ಬಗ್ಗೆ ವಿಚಾರಣೆ ಮಾಡಲು ನ್ಯಾಯಾಲಯದಲ್ಲಿ ಕೇಸ್ ಹಾಕುತ್ತಾರೆ ಅದರಲ್ಲಿ ವಿಚಾರಣೆ ಮಾಡುವಾಗ ಸಾಕ್ಷಿಗಳಿಗೆ ಘಟನೆ ಬಗ್ಗೆ ಪ್ರಶ್ನೆಗಳನ್ನು ಕೇಳುತ್ತಾರೆ ಎಂದು ನುಡಿದಿರುತ್ತಾರೆ. ಮೇಲ್ಕಂಡ ಪ್ರಶ್ನೋತ್ತರಗಳನ್ನು ಗಮನಿಸಿ ಸಾಕ್ಷಿಯು ಕೇಳುವ ಪ್ರಶ್ನೆಗಳಿಗೆ ಉತ್ತರಿಸಲು ಸಮರ್ಥರಿದ್ದಾರೆ ಎಂದು ಪರಿಗಣಿಸಿ ವಿಚಾರಣೆಗೆ ಅನುಮತಿಸಲಾಯಿತು.

1. ಮೃತ 2ನೇ ಆರೋಪಿ ಮಂಜುನಾಥ್ ಗೊತ್ತು. ಅವರು ನನಗೆ ಮಾವನಾಗಬೇಕು, ಈಗ ಅವರು ಅಪಘಾತದಲ್ಲಿ ತೀರಿಕೊಂಡಿದ್ದಾರೆ. 2023ರಲ್ಲಿ ಟೀಚರ್ಸ್ ಡೇ ದಂದು ನಾನು ಮತ್ತು ಮಾಮ ಗೋಬಿ ತಿನ್ನಲು ಸಂಜೆ ಸಮಯದಲ್ಲಿ ಮೈಸೂರು ಕಡೆಯಿಂದ ಹುಣಸೂರು ಕಡೆಗೆ ಬರುವ ರಸ್ತೆಯಲ್ಲಿ ಬ್ಲಾಕ್ ಕಲರ್ ಬುಲೆಟ್ ಗಾಡಿಯಲ್ಲಿ ರಸ್ತೆಯ ಎಡಭಾಗದಲ್ಲಿ ಕೋರ್ಟ್ ಎದುರುಗಡೆ ಬರುತ್ತಿರುವಾಗ ಅಪೊಸಿಟ್ ನಿಂದ ಒಂದು ಬ್ಲೂ ಕಲರ್ ಕಾರ್ ಬಂದು ನಮ್ಮ ಗಾಡಿಗೆ ಗುದ್ದಿತು. ಆಗ ನಾನು ಮೇಲೆ ಹಾರಿ ಕೆಳಗೆ ಬಿದ್ದೆ, ನಂತರ ನನಗೆ ಎಚ್ಚರವಾದಾಗ ಮೈಸೂರಿನ ಮಿಷನ್ ಅಸ್ಪತ್ರೆಯಲ್ಲಿದ್ದೆ. ಪೋಲೀಸರ ಮುಂದೆ ನಾನು ಈ ವಿಚಾರಗಳನ್ನು ಹೇಳಿದ್ದೇನೊ ಇಲ್ಲವೋ ನನಗೆ ಗೊತ್ತಿಲ್ಲ.

**<u>ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್ ಎನ್ ಕೆ ಅವರಿಂದ–</u>**

2. ನಾವು ಗೋಬಿ ತಿನ್ನಲು ಕೋರ್ಟ್ ಎದುರುಗಡೆ ಬರುತ್ತಿದ್ದವು ಎಂದು ಹೇಳಿದ್ದು, ಕೋರ್ಟ್ ಸುತ್ತಾಮುತ್ತಾ ಗೋಬಿ ಸೆಂಟರ್ ಎಲ್ಲೂ ಇಲ್ಲ ಎಂದರೆ ಇದೆ. ಕೋರ್ಟ್ ಎದುರುಗಡೆ ರೋಡ್ ನಲ್ಲಿ ಸ್ವಲ್ಪ ದೂರದಲ್ಲಿದೆ ನಾನು ಅದನ್ನು ನೋಡಿದ್ದೇನೆ. ನನಗೆ ಈ ಪ್ರಕರಣದ ಬಗ್ಗೆ ಎನೂ ಗೊತ್ತಿಲ್ಲ, ಅಪಘಾತ ಯಾರ ತಪ್ಪಿನಿಂದ ಆಯಿತು ಗೊತ್ತಿಲ್ಲ ಎಂದರೆ ಸರಿ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ.,ಹುಣಸೂರು.